DOC-264
T-P-2

R No KRNN 12

28-3-74

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

★★ Now in 57th Year ★★

'Satyavadi' daily, Mysore 4

ಸ್ಥಾಪಕರು: ಆರಮನೆ ಒರಸ್ತೆದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಲಂಕಾದಲ್ಲಿ ಸರ್ಕಾರದ ವಿರುದ್ಧ ಚಳುವಳಿ ನಿರ್ಧಾರ

ಮುಖ್ಯಮಂತ್ರಿಗಳ ಅಭಿನಂದನಾ ತಂತಿ

ಬೆಂಗಳೂರು— ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಪ್ರಥಮ ಬಾರಿ ಕರ್ನಾಟಕ ಜಯ ಗಳಿಸಿದ್ದಕ್ಕಾಗಿ, ತಂಡವನ್ನು ಅಭಿನಂದಿಸಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು, ತಂಡದ ನಾಯಕ ಶ್ರೀ ಪ್ರಸನ್ನರವರಿಗೆ ಅಭಿನಂದನಾ ತಂತಿ ಕಳಿಸಿದ್ದಾರೆ

★

ಕಾಪಿ ಮಾಡುವ ವಿದ್ಯಾರ್ಥಿಗಳು

ಫತೇಪುರ— ಬಿಂಡಕಿ ದಯಾನಂದ ಕಾಲೇಜಿನಲ್ಲಿಯ ಪರೀಕ್ಷೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಯತೇಚ್ಛವಾಗಿ ಕಾಪಿ ಮಾಡುವುದರಲ್ಲಿ ತೊಡಗಿದ್ದು, ತಮ್ಮ ಪಹರೆಗೆ ಹಾವನ್ನು ತಂದಿಟ್ಟುಕೊಂಡಿದ್ದರು ; ಇದನ್ನು ಕಂಡ ಪರೀಕ್ಷಾ ಮೇಲ್ವಿಚಾರಕರು ಗಾಬರಿಗೊಂಡು ಧೈರ್ಯ ಕುಂದಿದರು – ನಂತರ ವಿದ್ಯಾರ್ಥಿಗಳು ಹಾವನ್ನು ಬಿಟ್ಟುಬಿಟ್ಟರು ; ಅದು ಹರಿದಾಡುತ್ತ ಹೊರಟುಹೋಯಿತು

★

ನಿಲಿಟು ಸ್ಪರ್ಧೆ

ವಾಷಿಂಗ್ಟನ್— ರಷ್ಯಾವು ಸುಮಾರು 4 ಮಿಲಿಯ ಸೈನ್ಯ ಹೊಂದಿದ್ದು, ಇದು ಅಮೇರಿಕಾಕ್ಕಿಂತ ಎರಡರಷ್ಟಾಗಿದೆ – ಇದನ್ನು ಅಮೇರಿಕಾ ತಾಂತ್ರಿಕ ಮೇಲ್ಮೆಯಿಂದ ಸರಿತೂಗಿಸಲು ತೊಡಗಿದೆ

●

ಅಪ್ರೈತ ದೇವಾಲಯ

ಕೊಚ್ಚಿ– ಆದಿ ಶಂಕರಾಚಾರ್ಯರ ಜನ್ಮ ಸ್ಥಳವಾದ ಕಲಾಡಿಯಲ್ಲಿ ಪೆರಿಯಾರ ನದಿ ದಡದಲ್ಲಿ ರೂ 3.6 ಲಕ್ಷ ಖರ್ಚಿನಲ್ಲಿ ಶ್ರೀ ರಾಮಕೃಷ್ಣ ಅದ್ವೈತಾಶ್ರಮ ಮತ್ತು ದೇವಾಲಯ ನಿರ್ಮಾಣಗುತ್ತಿದೆ – ಇಲ್ಲಿ ಎಲ್ಲಾ ಧರ್ಮ ಮತ್ತು ಮತೀಯ ಜನರು ಆಲಿ ಪ್ರಾರ್ಥನೆ ಮತ್ತು ಧ್ಯಾನ ಮಾಡಬಹುದು – ಗರ್ಭಗುಡಿಯಲ್ಲಿ ರೂ 70 ಸಾವಿರ ಬೆಲೆಬಾಳುವ ಶ್ರೀ ರಾಮಕೃಷ್ಣ ಪರಮಹಂಸರ ಪ್ರತಿಮೆ ಇಡಲಾಗುತ್ತಿದೆ

ನಂ ಎಸಿಟಿ 2. ಎಸ್‌ಪಿ ಮಿಸ್.
48-309/72-73

ಸೂಪ್ರೆಪ್ಪ

ಟೆಂಡರ್ ಪ್ರಕಟಣೆ

ತಾ|| 12-3-1974

ವಿಷಯ :— 1974-75 ನೇಯ ಸಾಲಿಗೆ ಮೈಸೂರಿನಲ್ಲಿರುವ, ಸರ್ಕಾರದ ಗಂಧದ ಮರದ ಡಿಪೋವಿನಲ್ಲಿ ಗಂಧದ ಮರದ ಸಿದ್ಧತೆ ಮತ್ತು ಇತರ ಮಿಸೆಲೇನಿಯಸ್ ಕೆಲಸಗಳಿಗಾಗಿ ಟೆಂಡರ್

★

ಮೈಸೂರಿನಲ್ಲಿರುವ ಸರ್ಕಾರದ ವುಡ್ ಯಾರ್ಡ್ ಮತ್ತು ಗಂಧದ ಮರದ ಡಿಪೋದಲ್ಲಿ ಗಂಧದ ಮರದ ಸಿದ್ಧತೆ ಮತ್ತು ಇತರ ಮಿಸೆಲೇನಿಯಸ್ ಕೆಲಸಗಳಿಗಾಗಿ ಟೆಂಡರ್ ಎಂದು ಹೆಸರು ಬರೆದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಮತ್ತು ಮೈಸೂರು-1 ರಲ್ಲಿರುವ, ಮೈಸೂರು ಅರಣ್ಯ ವಿಭಾಗದ ವಿಭಾಗ ಅರಣ್ಯ ಅಧಿಕಾರಿಯವರಿಂದ ಅಥವಾ ಅವರಿಂದ ಅಧಿಕಾರ ಪಡೆದ ಮತ್ತೊಬ್ಬ ಅಧಿಕಾರಿಯವರಿಂದ. 1974-75 ನೇ ಸಾಲಿನಲ್ಲಿ 31 ನೆಯ ಮಾರ್ಚಿ 1975 ಕ್ಕೆ ಅಂತ್ಯವಾಗುವ ಅಥವಾ ಮುಂದಿನ ಒಪ್ಪಂದ ತೀರ್ಮಾನವಾಗುವ ವರೆಗೆ ಯಾವುದು ಕಡಿಮೆ ಅಂಥ ಹುದನ್ನು ಮೈಸೂರಿನಲ್ಲಿರುವ, ಸರ್ಕಾರದ ಗಂಧದ ಮರದ ಡಿಪೋವಿನಲ್ಲಿ ಮಾಡಬೇಕಾದ ಅನೇಕ ಕೆಲಸಗಳಿಗಾಗಿ 15-4-1974 ರ ಮಧ್ಯಾಹ್ನ 4 ಗಂಟೆ ವರೆಗೆ, ಮೈಸೂರು-1 ರಲ್ಲಿರುವ. ಮೈಸೂರು ಅರಣ್ಯ ವಿಭಾಗದ ವಿಭಾಗ ಅರಣ್ಯ ಕಚೇರಿಯಲ್ಲಿ ಸ್ವೀಕರಿಸಲಾಗುವುದು.

ಕೆಲಸದ ದಿನಗಳಲ್ಲಿ ಕಚೇರಿ ವೇಳೆಗಳಲ್ಲಿ, ಮೈಸೂರು-1 ರಲ್ಲಿರುವ, ಮೈಸೂರು ವಿಭಾಗವ, ವಿಭಾಗ ಅರಣ್ಯ ಅಧಿಕಾರಿಯವರೊಡನೆ, ಟೆಂಡರ್ ಬಗ್ಗೆ ಇತರ ಹೆಚ್ಚು ವಿವರಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ವ್ಯವಹರಿಸಿರಿ

ಸಹಿ/– ಈಶ್ವರಪ್ಪ,
ವಿಭಾಗ ಅರಣ್ಯ ಅಧಿಕಾರಿಯವರು,
ಮೈಸೂರು

ಶ್ರೀ ಲಂಕಾ ಪನುಸ್ಯೆ

ಕೊಲಂಬೊ— ಶ್ರೀಮಾವೋ ಸರಕಾರವು ತನ್ನ 5 ವರ್ಷದ ಅವಧಿ ನಂತರ ಅಧಿಕಾರದಲ್ಲಿರಲು ಪ್ರಯತ್ನಿಸಿದೆ, ಈ ರೀತಿ ಬೆದರಿಕೆಗಳು ಬಂದಿವೆ– ಕ್ಯಾಂಡಿ–ಸೆಂಕಡಗಾಲ ಭಿಕ್ಷುಗಳ ರಂಗದ 5000 ಭಿಕ್ಷುಗಳು ನ್ಯಾಷನಲ್ ಅಸೆಂಬ್ಲಿ ಮುಂದೆ ಪ್ರಾಯೋಪವೇಶಕ್ಕೆ ಕೈಗೊಳ್ಳುವುದಾಗಿ ತಿಳಿಸಿರುವರು – ವಿರೋಧಪಕ್ಷ ನಾಯಕ ಶ್ರೀ ಗುಣವರ್ಧನರು ತನ್ನ ಶಾಸನೋಲ್ಲಂಘನ ಚಳವಳಿಯನ್ನು ಏಪ್ರಿಲ್ 21 ರಿಂದ ಪ್ರಾರಂಭಿಸುವುದಾಗಿ ತಿಳಿಸಿರುವರು : ತನ್ನ ಅನುಯಾಯಿಗಳು ಬಸ್ ಮತ್ತು ಸೈಕಲ್ ದರ ಏರಿಸಿದ್ದನ್ನು ಪ್ರತಿಭಟಿಸಿ ಅವುಗಳಲ್ಲಿ ಟಿಕೀಟಿಲ್ಲದೆ ಪ್ರಯಾಣ ಕೈಗೊಳ್ಳುವರು – ಅಕ್ಕಿ ಸಾಗಾಣಿಕೆ ಪ್ರತಿಬಂಧ ಮತ್ತು ಬಟ್ಟೆ ಜೊತೆ ಏರಿಕೆ ಪ್ರತಿಭಟಿಸಿ ಸೊಂಟಕ್ಕೆ ಮಾತ್ರ ಒಟ್ಟಿ ಕುತ್ತಿಕೊಂಡು ಒಂದು ಅಳತೆ ಅಕ್ಕಿ ಹಿಡಿದುಕೊಂಡು ಜನರು ಪೊರತಣಿಗೆ ನಡೆಸುವರು – ಸರ್ಕಾರ ಇದನ್ನೆಲ್ಲಾ ಎದುರಿಸುವುದೆಂದು ಹೇಳಲಾಗಿದೆ.

●

ಅಕ್ಕಿ ಇತ್ಯಾದಿ ವಶ

ಮೈಸೂರು— ಆಹಾರ ತನಿಖಾದಳ (ಫುಡ್ ಸೆಲ್) ರವರು ತಾ|| 25 ರಂದು ಮೈಸೂರು–ಕಲ್ಲೀಕೋಟೆ ರಸ್ತೆಯಲ್ಲಿನ ಮೂಲೆಹೊಳೆ ಚೆಕ್ ಪೋಸ್ಟಿನ ಬಳಿ ಕಳ್ಳ ಸಾಗಾಣಿಕೆಯಲ್ಲಿ ಅಕ್ಕಿ, ಧನಿಯಾ, ನೆಲ್ಲೀಕಾಯಿ, ಕುಸಬಲಕ್ಕಿ ಸಾಗಿಸಲು ತೊಡಗಿದ್ದ ಎರಡು ಲಾರಿಗಳನ್ನು ಹಿಡಿದಿದ್ದಾರೆ – ಡ್ರೈವರ್ ಮತ್ತು ಕ್ಲೀನರುಗಳ ನೆರವಿನಿಂದ ತಪಾಸಣೆ ಕ್ರಮ ಕೈಗೊಳ್ಳಲಾಗಿದೆ

ಪಾಂಡಿಚೆರಿ ನೂತ್ರಿಮಂಡಲ

ಪಾಂಡಿಚೆರಿ— 3 ವಾರಗಳ ಅಣ್ಣಾಡಿ ಎಂ ಕೆ ಮಂತ್ರಿಮಂಡಲವು ಶಾಸನಸಭೆಯಲ್ಲಿ ಸ್ಪೀಕರ್ ಚುನಾವಣೆ ಸಂಬಂಧದಲ್ಲಿ ಒಂದು ವೋಟಿನಿಂದ ಸೋತಿತು ; ಮುಖ್ಯಮಂತ್ರಿಯವರು ಗೌರ್ನರರಿಗೆ ರಾಜೀನಾಮೆ ಅರ್ಪಿಸಿ, ಶಾಸನಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆ ನಡೆಸುವಂತೆ ಅಧ್ಯಕ್ಷರಿಗೆ ಶಿಫಾರಸು ಮಾಡುವಂತೆ ತಿಳಿಸಿದರು.

★

ಅಧ್ಯಕ್ಷರ ಆಳ್ವಿಕೆ

ನವದೆಹಲಿ– ಪಾಂಡಿಚೆರಿಯಲ್ಲಿ ಅಣ್ಣಾಡಿ ಎಂ ಕೆ ಮಂತ್ರಿಮಂಡಲ ಪತನವಾಗಿ ರಾಜೀನಾಮೆ ಇತ್ತಿರುವುದರಿಂದ, ಅಲ್ಲಿ ಅಧ್ಯಕ್ಷರ ಆಳ್ವಿಕೆ ಜಾರಿಗೆ ಬರುವುದು ಖಂಡಿತವೆನ್ನಲಾಗುತ್ತಿದೆ

★

ಭಾರತಕ್ಕೆ ಬ್ರಿಟನ್ನಿನ ಸಾಲ

ನವದೆಹಲಿ— ಒಟ್ಟು ಸುಮಾರು ರೂ. 75 ಕೋಟಿಯ 3 ಸಾಲಗಳನ್ನು ಭಾರತಕ್ಕೆ ಬ್ರಿಟನ್ ಕೊಡುವ ಒಪ್ಪಂದಕ್ಕೆ ರುಜುವಾಯಿತು.

ಗೋಧಿ ವ್ಯಾಪಾರ

ನವದೆಹಲಿ— ಸರಕಾರವು ಗೋಧಿಯನ್ನು ಸಗಟು ವ್ಯಾಪಾರಿಗಳ ಮೂಲಕ ಕೊಳ್ಳಲು ನಿರ್ಧರಿಸಿದೆ.

ಜನತಾ ಆಶೋತ್ತರ ದೃಢನಿರ್ಧಾರ ಹತ್ತಿಕ್ಕಲು ಎಂಥಾ ಬೃಹತ್‌ಶಕ್ತಿಗೂ ಸಾಧ್ಯವಿಲ್ಲ

— —

ಇದಕ್ಕೆ ಉದಾಹರಣೆ ಬಂಗ್ಲಾದೇಶ. ಪೂರ್ವ ಬಂಗಾಳಾದಲ್ಲಿ ವಿಮೋಚನಾ ಹೋರಾಟವನ್ನು ದಮನ ಮಾಡುವುದಕ್ಕೆ ಅಮೇರಿಕವು ಪಾಕಿಸ್ತಾನಕ್ಕೆ ಪೂರ್ಣ ಬೆಂಬಲ ನೀಡಿತು ; ಈ ಪ್ರಯತ್ನದಲ್ಲಿ ಮೂರು ಮಿಲಿಯ ಬಂಗಾಲಿಗಳನ್ನು ಕೊಲ್ಲಲ್ಪಟ್ಟರು ಮುನ್ನೂರು ಸಾವಿರ ಮಹಿಳೆಯರ ಮಾನಭಂಗವಾಯಿತು ;. ಹತ್ತು ಮಿಲಿಯ ಜನರು ಭಾರತಕ್ಕೆ ನಿರಾಶ್ರಿತರಾಗಿ ಬಂದರು ; ಆದರೂ ಮಣಿಯದೆ.. ಬಂಗಾಲಿ ಜನತೆ ಹೋರಾಡಿದರು ; ಭಾರತದ ಸಹಾಯದಿಂದ ತಮ್ಮ ಗಣರಾಜ್ಯವನ್ನು ಸ್ಥಾಪಿಸಿಕೊಂಡರು ; ಈಗ 75 ಮಿಲಿಯ ಜನಸಂಖ್ಯೆಯ ಬಂಗ್ಲಾದೇಶವು ಪ್ರಪಂಚದಲ್ಲಿ ಏಳನೇ ಸ್ವತಂತ್ರ ರಾಷ್ಟ್ರವಾಗಿದೆ ; ಪಾಕಿಸ್ತಾನ ಅದಕ್ಕೆ ಮಾನ್ಯತೆ ನೀಡಲೇಬೇಕಾಯಿ ಎ.

ಮತ್ತೊಂದು ಉದಾಹರಣೆ ವಿಯತ್ನಾಂ. ಅಲ್ಲಿ ಯುದ್ಧ ಅಂತ್ಯಗೊಂಡಿದೆ ; ಆದರೆ ಇನ್ನೂ ಶಾಂತಿ ಸ್ಥಾಪನೆಯಾಗಿಲ್ಲ. ಈ ಯುದ್ಧಕ್ಕೆ ಅಮೇರಿಕಾ ಅಸಾರವ್ಹಾದ ಬೆಲೆ ತೆರಬೇಕಾಯಿತು ; ಅದರಲ್ಲಿ 46000 ಅಮೇರಿಕನ್ನರು ಅಸು ನೀಗಿದರು ; ಖರ್ಚು 130 ಮಿಲಿಯ ಡಾಲರುಗಳಾಯಿತು ; ಗಾಯಗೊಂಡವರು ಮತ್ತು ನಾಪತ್ತೆಯಾಗಿರುವವರನ್ನೂ ಸೇರಿಸಿದರೆ ಒಟ್ಟು ಮಾನವ ಜೀವಿಗಳ ನಷ್ಟ ಸುಮಾರು 300000 ಈ ಪುಟ್ಟ ರಾಷ್ಟ್ರದ ಮೇಲೆ ಸುಮಾರು 7.50 ಮಿಲಿಯ ಟನ್ನುಗಳ ಬಾಂಬುಗಳನ್ನು ಸುರಿಯಲಾಯಿತು ; ಇದು ಎರಡನೇ ಜಾಗತಿಕ ಯುದ್ಧದಲ್ಲಿ ಬಳಸಲಾದ ಬಾಂಬುಗಳ ಪ್ರಮಾಣದ ಮೂರರಷ್ಟಾಗುತ್ತದೆ. ಹಾಗಿದ್ದರೂ ಈ ಪುಟ್ಟ ರಾಷ್ಟ್ರದ ಸ್ವಾತಂತ್ರ್ಯಯೋಧರು ಮಣಿಯದೇ ಅಜೇಯರಾದರು.

ವುಡ್‌ಲಾಂಡ್ಸ್ 29 3 74 ರಿಂದ

ಅವೋಫು ಆರಂಭ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ದಿನ 3 ಪ್ರದರ್ಶನಗಳು

ಅಪೆರಾ 22 3 74 ರಿಂದ

ಜೀನಸ್

ಯೂನಿವರ್ಸಲ್ ಪಿಕ್ಚರ್ಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ಪಾತ್ರ — ಜೆಮಿನಿ ಗಣೇಶ್ ಸುಂದರಂಬರ್ ನಿರ್ಮಲ ನಂಬಿಯಾರ್

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ



ಪೂರ್ಣ ನಿಷೇಧವಾಗಲಿ

Protect the Cow

Help The Gorakshana

— Humanitarian Propaganda Monthly —

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram Mysore